**<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 309/2023**

| | | | |
|---|---|---|---|
| **ಹೆಸರು** | : | **ರಾಮರೆಡ್ಡಿ** | ಚಾ.ಸಾ. 3 |
| **ತಂದೆಯ ಹೆಸರು** | : | **ನಾಗರೆಡ್ಡಿ** | ಪ್ರಾ.ಸಾ. 2 |
| **ವಯಸ್ಸು** | : | **55 ವರ್ಷ** | ದಿನಾಂಕಃ 21-04-2025 |
| **ಉದ್ಯೋಗ** | : | **ಒಕ್ಕಲುತನ** | |
| **ವಾಸಸ್ಥಳ** | : | **ತಾಜಲಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ 1 ಮತು ಪ್ರಾಸಾ 1 ರವರು ನನಗೆ ಗೊತ್ತು. ಅವರು ನಮ್ಮ ಊರಿನವರು.

ಈಗ ನೋಡುತ್ತಿರುವ ನಿಪಿ 1 ರ ದಾಖಲೆಯಲ್ಲಿ ನನ್ನ ಹೆಬ್ಬೆರಳಿನ ಗುರುತು ಇದೆ.

ಈಗೆ 1-2 ವರ್ಷದ ಹಿಂದೆ ತಾಜಲಾಪುರದಲ್ಲಿ ನಾನು ಒಂದು ಹೋಟೆಲನಲ್ಲಿ ಚಹಾಕುಡಿಯುತ್ತಾ ಕುಳಿತಾಗ ಪೋಲಿಸರು ಸಹಿ ಮಾಡು ಎಂದು ಹೇಳಿದ್ದಕ್ಕೆ ನಾನು ಹೆಬ್ಬೆರಳಿನ ಗುರುತನ್ನು ಹಾಕಿದ್ದೇನೆ. ಯಾವ ಕಾರಣಕ್ಕಾಗಿ ಹೆಬ್ಬೆರಳಿನ ಗುರುತು ಪಡೆದರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಪಂಚನಾಮೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಗಂಡ ಹೆಂಡತಿ ಜಗಳದ ಕಾರಣ ಪೋಲಿಸರು ಚಾಸಾ 1 ರವರ ಮನೆಯ ಮುಂದೆ ಪಂಚನಾಮೆ ಮಾಡಿದ್ದರು ಎಂದರೆ ಸಾಕ್ಷಿ ಪಂಚನಾಮೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ SNB ವಕೀಲರಿಂದಃ ಇಲ್ಲಾ.</u>**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**